**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 161 / 2017**

ಚಾಸಾ :- 06 ಪ್ರಾಸಾ :- 07

| | |
|---|---|
| ಹೆಸರು | **ರವಿ** |
| ತಂದೆ ಹೆಸರು | **ನಿಂಗಪ್ಪ** |
| ವಯಸ್ಸು | **38** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ನೇರಳೆಮರದದೊಡ್ಡಿ** |

**ದಿನಾಂಕಃ 05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ಚಾಸಾ-1 ಮತ್ತು 2 ರವರು ಪರಿಚಯವಿರುತ್ತಾರೆ. ಚಾಸಾ-3 ರಿಂದ ಚಾಸಾ-5 ಮತ್ತು ಚಾಸಾ-7 ಮತ್ತು 8 ರವರು ಪರಿಚಯವಿರುವುದಿಲ್ಲ. ಆರೋಪಿಯು ಗೊತ್ತಿರುವುದಿಲ್ಲ. ಈಗ ಸಾಕ್ಷಿಗೆ ಕೃತ್ಯ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಕೃತ್ಯ ಸ್ಥಳ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಪಂಚನಾಮೆ ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಯಾವ ಕಾರಣಕ್ಕಾಗಿ ಹಾಗೂ ಯಾವ ಜಾಗದಲ್ಲಿ ಮಾಡಿರುತ್ತೇನೆಂದು ನನಗೆ ಗೊತ್ತಿರುವುದಿಲ್ಲ. ಸದರಿ ಸಹಿಗಳನ್ನು ಮಾಡುವ ಕಾಲದಲ್ಲಿ ಪೋಲಿಸರು ನನ್ನ ಸಮಕ್ಷಮ ಏನನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ಪೋಲಿಸರು ಸಹಿ ಮಾಡುವಂತೆ ಕೇಳಿದ ಮೇರೆಗೆ ಸಹಿ ಮಾಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ದಿನಾಂಕಃ 12-01-2017 ರಂದು ಕೆರೆಹಳ್ಳಿ ಗ್ರಾಮದ ಚಾಸಾ-1 ರವರಿಗೆ ಸೇರಿದ ಸರ್ವೆ ನಂಬರ್-32ಪಿ/17 ರ ಜಮೀನಿನಲ್ಲಿರುವ ಪಂಪ್ ಹೌಸ್ ಬಳಿ ನಿಮ್ಮ ಮತ್ತು ಚಾಸಾ-1 ಹಾಗೂ ಚಾಸಾ-5 ರವರ ಸಮಕ್ಷಮ ಮಧ್ಯಾಹ್ನ 1.45 ರಿಂದ 2.30 ಗಂಟೆಯವರೆಗೆ ಕೃತ್ಯ ಸ್ಥಳದ ಪಂಚನಾಮೆಯನ್ನು

ಜರುಗಿಸಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿಃ 12-01-2017 ರಂದು ನಿಮ್ಮ ಹಾಗೂ ಚಾಸಾ-1 ರವರ ಸಮಕ್ಷಮ ಹುಣಸೆದೊಡ್ಡಿ ಗ್ರಾಮದ ಬೈರಪ್ಪನವರ ಮಾವಿನ ತೋಟದ ಜಮೀನಿನಲ್ಲಿ ಚಾಸಾ-1 ರವರು ಪೋಲಿಸರ ವಶದಲ್ಲಿದ್ದ ಆರೋಪಿಗಳಾದ ಗಿರೀಶ ಮತ್ತು ಶ್ರೀನಿವಾಸ ಎಂಬುವರನ್ನು ತೋರಿಸಿ ಇವರೆ ದಿಃ 05-01-2017 ರಂದು ರಾತ್ರಿ ವೇಳೆಯಲ್ಲಿ ಚಾಸಾ-1 ರವರ ಜಮೀನಿನಲ್ಲಿರುವ ಕೇಬಲ್ ವೈರನ್ನು ಕಳ್ಳತನ ಮಾಡಿಕೊಂಡು ಬಂದು ಸುಟ್ಟು ತಾಮ್ರದ ವೈರ್ ಉಂಡೆ ಮಾಡಿರುವ ಸ್ಥಳವನ್ನು ತೋರಿಸಿ ನಿಮ್ಮ ಮತ್ತು ಚಾಸಾ-1 ರವರ ಸಮಕ್ಷಮ ಪಂಚನಾಮೆಯನ್ನು ಸಂಜೆ 6 ಗಂಟೆಯಿಂದ 6.40 ಗಂಟೆಯವರೆಗೆ ಜರುಗಿಸಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ಎಲ್ಲಾ ವಾಹಿತಿ ಗೊತ್ತಿದ್ದರೂ ಹಾಗೂ ನಿಪಿ-2 ಮತ್ತು 6 ರಲ್ಲಿರುವ ಮಾಹಿತಿಯನ್ನು ನಿಮಗೆ ತಿಳಿಸಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು** :- ಶ್ರೀಮತಿ. ಕೆ.ಹೆಚ್.ಪಿ. ವಕೀಲರಿಂದ **ಆರೋಪಿ** ಪರವಾಗಿ :-

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ :- ಇರುವುದಿಲ್ಲ.

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.